ವಿಧಾನ ಪರಿಷತ್ತಿನಲ್ಲಿ ಯಾವುದೇ ಸಂದೇಶ ಇಟ್ಟುಕೊಳ್ಳಬಾರದು, ನಾವು ಪ್ರವೇಶ ಪರೀಕ್ಷೆ ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ಡಿ. ಮಂಜುನಾಥ್ : ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಮಾಡುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿಲ್ಲ. ಇಲ್ಲಿ ಹೇಳಿಕೆಯಾದ ಮೇಲೆ, ಮತ್ತೆ ಅಧಿಕಾರಿಗಳನ್ನು ಕರೆಯಿಸಿ ಮಾತನಾಡಿದ್ದೇನೆ. ಏಕೆಂದರೆ, ಈ ಪರೀಕ್ಷೆ ಮಾಡಿ, ಎಲ್ಲಾ ಆಗಬೇಕಾದರೆ ತಡವಾಗುತ್ತದೆ. ಕಳೆದ ವರ್ಷ ಏನು ಗೊಂದಲ ಆಯಿತು. ಅದು ಆಗಬಾರದೆಂದು, ಅಧಿಕಾರಿಗಳನ್ನು ಕರೆಯಿಸಿ ಮಾತನಾಡಿದ್ದೇನೆ. ಆಮೇಲೆ ಮುಖ್ಯಮಂತ್ರಿಗಳ ಹತ್ತಿರವೂ ಮತ್ತೆ ಮಾತನಾಡಿದ್ದೇನೆ, ಪ್ರವೇಶ ಪರೀಕ್ಷೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಸುರೇಶ್‌ಕುಮಾರ್ : ಈ ವರ್ಷ ಪ್ರವೇಶ ಪರೀಕ್ಷೆ ಮಾಡುತ್ತಿರೋ?

ಅಧ್ಯಕ್ಷರು : ಮಾಡುತ್ತಾರೆ.

ಶ್ರೀ ಎ. ರಾಮದಾಸ್ : ಮೇಲ್ಮನೆಯಲ್ಲಿ ಪ್ರವೇಶ ಪರೀಕ್ಷೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಇಲ್ಲಿ ''ಪರಿಶೀಲನೆ ಮಾಡುತ್ತೇವೆಂದು'' ಹೇಳಿದ್ದಾರೆ. ಸರ್ಕಾರದಿಂದ ಸರಿಯಾದ ಉತ್ತರ ಬಂದಿಲ್ಲ. ಈ ಗೊಂದಲದಲ್ಲಿ ವಿದ್ಯಾರ್ಥಿಗಳು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಲ್ಲಿ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿದಾಗ, ಏನು ತೀರ್ಮಾನ ಮಾಡಬೇಕೋ, ಏನು ಪಾಲಿಸಿ ತೆಗೆದುಕೊಳ್ಳಬೇಕೋ ಎಂಬ ಬಗ್ಗೆ ಹೌಸ್‌ನಲ್ಲಿ 4 ಗಂಟೆಯಲ್ಲಿ ಉತ್ತರ ಕೊಡಬೇಕಾದರೆ, ಕೊಟ್ಟಿರಬಹುದು. ಆದರೆ, ನಾವೇನು ಹೇಳುತ್ತೇವೆ ಎಂದರೆ, ಹೋದಸಾರಿ ಪರೀಕ್ಷೆಯಾದಾಗ, ಅಂದರೆ ಪಿ.ಯು.ಸಿ. ಪರೀಕ್ಷೆ ನಡೆಯುವಂಥ ಸಂದರ್ಭದಲ್ಲಿ, ಏಪ್ರಿಲ್ ೧೫ ರಿಂದಲೇ ಸಿದ್ಧತೆ ಯಾಗುತ್ತಿತ್ತು. ನೀವು ಈ ಸಾಮಾನ್ಯ ಪ್ರವೇಶ ಪರೀಕ್ಷೆ ಮಾಡುತ್ತೀರಿ. ಆದರೆ, ಇದಕ್ಕೆ ಆಗಬೇಕಾದ ಅಪ್ಲಿಕೇಷನ್‌ಗಳು, ತರಾತುರಿಯಲ್ಲಿ ಸಿದ್ಧತೆ ಮಾಡಿಕೊಳ್ಳುವುದಕ್ಕೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ? ಈ ಸದನದ ಮೂಲಕ ಈ ರಾಜ್ಯದ ಇಂಜಿನಿಯರ್, ಮೆಡಿಕಲ್, ಡೆಂಟಲ್ ಇತ್ಯಾದಿಗಳಿಗೆ ಪ್ರವೇಶ ಪರೀಕ್ಷೆ ಕಂಡಕ್ಟ್ ಮಾಡುತ್ತೇವೆ. ಆಗಬೇಕಾದ ಸಿದ್ಧತೆ ಮಾಡುತ್ತೇವೆ ಎನ್ನುವುದನ್ನು ಸ್ಪಷ್ಟಮಾಡಿದರೆ ಮುಗಿದುಹೋಯಿತು.

ಶ್ರೀ ಡಿ. ಮಂಜುನಾಥ್ : ನಾವು ಮಾಡುತ್ತೇವೆಂದು ಹೇಳಿದ್ದೇವೆ, ಸಿದ್ಧತೆಯನ್ನೂ ಮಾಡುತ್ತೇವೆ, ಪರೀಕ್ಷೆಯನ್ನೂ ಮಾಡುತ್ತೇವೆ.

4) Admission to P.G. Course for the students who passed MBBS in 4 attempts.

Sri Quamarul Islam : Sir, the students of medical college at Gulbarga are planning to have from 22/4/1995.

They have also given a threat that they are going to boycot the hospital attached to their college from 22nd of this month. Their main demand is that students with 4 attempts should also be admitted to P.G. Courses. This is a discriminatory rule adopted by the Gulbarga University which is not there in either in Mysore University of Kuvempu University or in any other University in Karanataka. I would like to know why this type of discriminatory rule has been adopted by the Gulbarga University. So many renowned specialists and doctors in the medical field have passed their MBBS in more than 4 attempts. For example, Dr. Javali, a best and renowned cardialogist had passed this MBBS in 7 attempts. Another example is Dr. Jeevraj Alva, an Hon'ble Member of this house. Is it not discriminatory. Another problem, is if this rule is implemented our boys from Gulbarga are deprived of their admissions, whereas, students from other colleges will get admissions to P.G. courses.

Mr. Speaker: I will get you the answer. Please look here.

Sri Quamarul Islam : I want a positive relpy. I would like to know what specific direction the government is going to give to Gulbarga University?

ಶ್ರೀ ಡಿ. ಮಂಜುನಾಥ್ : ಗುಲ್ಬರ್ಗಾ ಯೂನಿವರ್ಸಿಟಿಯಲ್ಲಿ ಆ ತರಹ regulation ಮಾಡಿಕೊಂಡಿದ್ದಾರೆ. ಆದರೆ, ಬೇರೆ ಕಡೆಯಲ್ಲಿ ಈ ತರಹ regulation ಇಲ್ಲ. ಆ ವಿದ್ಯಾರ್ಥಿಗಳೂ ನನ್ನ ಹತ್ತಿರ ಬಂದಿದ್ದರು. ನಾನು ಚರ್ಚೆ ಮಾಡಿದ್ದೇನೆ ಮತ್ತು ಯೂನಿವರ್ಸಿಟಿಯವರಿಗೆ ಏನು ಹೇಳಿದ್ದೇನೆಂದರೆ, ಒಂದೊಂದು ವಿಶ್ವವಿದ್ಯಾನಿಲಯದಲ್ಲೂ ಈ ತರಹ ಇರುವುದು ಸರಿಯಲ್ಲ, ನೀವು ಏನಾದರೂ ಮಾಡಿ ಬದಲಾವಣೆ ಮಾಡಿ ಎಂದು ಹೇಳಿದ್ದೇನೆ. ವೈಸ್‌ಚಾನ್ಸಲರ್ ಹತ್ತಿರವೂ ಮಾತನಾಡಿದ್ದೇನೆ. ಅವರು ಕನ್‌ಸಿಡರ್ ಮಾಡುತ್ತಾರೆ. ಏಕೆಂದರೆ ಇದು ಅಕಾಡೆಮಿಕ್

ಕೌನ್ಸಲ್‌ಗೆ ಬರುತ್ತದೆ. It is a matter relating to Academic council of the Gulbarga University.

Sri Quamarul Islam : The Members of the Academic council have opposed it.

Sri. D. Manjunath : Again I have asked them to reconsider. ಇಲ್ಲಿ ಏನಾಗಿದೋ, ಡಿಸ್ಕ್ರಿಮಿನೇಷನ್ ಎಂದು ತಾವು ಹೇಳುತ್ತೀರಿ. ಬೇರೆ ಯೂನಿವರ್ಸಿಟಿಯಲ್ಲಿ ಆ ತರಹ ಇಲ್ಲ. 5 ಅಟೆಂಪ್ಟ್ ಪರೀಕ್ಷೆಯಲ್ಲಿ ಫೇಲ್ ಆದರೆ, ಅವನು ಪರೀಕ್ಷೆಗೆ ಕೂರಿಸಕೂಡದು ಎಂದು ಮಾಡಿದ್ದಾರೆ. ಅವರ ಹತ್ತಿರವೂ ನಾನು ಮಾತನಾಡಿದ್ದೇನೆ, ನೋಡೋಣ.

Sri. Quamarul Islam : You call a meeting of all the VCs in Karnataka . Such a discriminating rule cannot be there in Gulbarga University. Though they are autonomous bodies the Government have powers to summon all the VCs of Universities in Karnataka and they have to adopt uniform rules in the entire State.

ಒಬ್ಬ ಮಾನ್ಯ ಸದಸ್ಯರು : ತಾವು ನನಗೆ ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇರಿಗೇಷನ್ ಮೇಲೆ, ಡೆವಲಪ್‌ಮೆಂಟ್ ವರ್ಕ್ಸ್ ಮತ್ತು ಎಲ್ಲದರ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಅವರು ನೀರು ಬಿಡುವುದರ ಬಗ್ಗೆ ಮಾತ್ರ ಮಾತನಾಡುತ್ತಾರೆ. ಒಂದೇ ಒಂದು ವಿಷಯವೇನೆಂದರೆ, ತುಂಗಭದ್ರಾ ಕಾಲುವೆ ಬಗ್ಗೆ ಮಾತ್ರ ಅವರು ಮಾತನಾಡತಕ್ಕಂಥಾದ್ದು. ಅವರು ಬೇರೆಯದಕ್ಕೆ ಸಂಬಂಧಪಟ್ಟಿದ್ದನ್ನು ಹೇಳುವುದಿಲ್ಲ ಹಾಲಿ ಇರತಕ್ಕಂಥ ಬೆಳೆಯನ್ನು ಉಳಿಸಿಕೊಳ್ಳತಕ್ಕಂಥಾದ್ದರ ಬಗ್ಗೆ ಮಾತ್ರ ಹೇಳುತ್ತಾರೆ.

ಅಧ್ಯಕ್ಷರು : ಆದೇ ಸಂದರ್ಭದಲ್ಲಿ ಮಾತನಾಡಲಿ, ಎಲ್ಲವನ್ನೂ ಸೇರಿಸಿ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಷ್ಯೂಸ್ ಬೇರೆ ಬೇರೆ ಇದೆ. ಹೀಗಾಗಿ ಚರ್ಚೆಯಲ್ಲಿ ಎಲ್ಲರೂ ಭಾಗವಹಿಸುತ್ತಿದ್ದಾರೆ. ಇದು ಸೀಮಿತವಾದ ಪ್ರಶ್ನೆ ಇದ್ದ ಕಾರಣ ಅವರೇ ಮಾತನಾಡುತ್ತಾರೆ.

ಅಧ್ಯಕ್ಷರು : ಇದರಲ್ಲಿಯೇ ಸೇರಿಸೋಣ. ನಿಮಗೆ ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ. ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : 7ನೇ ತಾರೀಖಿನಿಂದ ಧರಣಿ ನಡೆಯುತ್ತಿದೆ. ಸರ್ಕಾರ ಇದರ ಬಗ್ಗೆ ಗಮನ ಹರಿಸುತ್ತದೆಯೇ ಎನ್ನುವುದನ್ನು ಹೇಳಬೇಕಾಗಿದೆ. ಏಕೆಂದರೆ, ರಾಜ್ಯಾದ್ಯಂತ ಸಮಸ್ಯೆ ಇದೆ.

ಅಧ್ಯಕ್ಷರು : ತಮಗೆಲ್ಲರಿಗೂ ಗೊತ್ತಿದೆ, 20ನೇ ತಾರಿಖಿನಿಂದ ಬಿಡುವು ಇಲ್ಲದೇ ಕೆಲಸ ಮಾಡುತ್ತಿದ್ದೇವೆ. ಎಲ್ಲಾ ವಿಚಾರಗಳನ್ನೂ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಇವತ್ತು ಕಡೆಯ ದಿವಸ, ವಿಶೇಷವಾಗಿ ನೀರಾವರಿ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ರಾಜ್ಯದಲ್ಲಿ ಇನ್ನೂ ಅನೇಕ ಸಮಸ್ಯೆಗಳು ಇವೆ. ಎಲ್ಲವನ್ನೂ ಇವತ್ತೇ ಚರ್ಚೆ ಮಾಡುತ್ತೀರಾ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಸರಿಯಲ್ಲ. ಏಕೆಂದರೆ,

ಒಬ್ಬ ಮಾನ್ಯ ಸದಸ್ಯರು : ಸೀನಿಯಸ್ಸ್‌ರೇ ಮಾತನಾಡುತ್ತಾರೆ. ನಾವು ಏನಾದರೂ ಮಾತನಾಡಿದರೆ ತಪ್ಪೆ. ಅಧ್ಯಕ್ಷರೇ ತಾವೇ ಹೇಳಿ. ನಾವು ಏನಾದರೂ ಹೇಳೋಣವೆಂದರೆ, ಅವರೇ ಎದ್ದು ನಿಲ್ಲುತ್ತಾರೆ. ಹೀಗಾದರೆ, ನಾವೇನು ಮಾಡೋಣ.

ಅಧ್ಯಕ್ಷರು : ನೀವೂ ಇನ್ನು ಮುಂದೆ ಸೋಲದೇ ಗೆದ್ದು ಬಂದು, ಸೀನಿಯರ್ಸ್ ಆಗಿ.

ಶ್ರೀ ಸಿ.ಎಚ್. ವಿಜಯಶಂಕರ : ಕಾವೇರಿ ವಿಚಾರ ಪ್ರಸ್ತಾಪ ಮಾಡುವ ಬಗ್ಗೆ ಗಮನ ಕೊಡಬೇಕು. ಕಾವೇರಿ ವಿಚಾರದಲ್ಲಿ ಸಂಬಂಧಪಟ್ಟ ಶಾಸಕರ ಸಭೆಯನ್ನು ಕರೆಯತಕ್ಕ ಕೆಲಸವೂ ಮುಂದೆ ಹೋಗಿದೆ. ಟ್ರಿಬ್ಯುನಲ್ ವಿಚಾರ ಏನಾಯಿತ್ತು, ಅಚ್ಚುಕಟ್ಟಿಗೆ ಸಂಬಂಧಪಟ್ಟ ಶಾಸಕರಿಗೆ ಸ್ಪಷ್ಟವಾದ ಮಾಹಿತಿ ಇಲ್ಲ. ಕಾವೇರಿ ವಿಚಾರದಲ್ಲಿ ಸರ್ಕಾರದ ಸ್ಪಷ್ಟ ನಿಲುವೇನು?

ಅಧ್ಯಕ್ಷರು : ಕಾವೇರಿ ನೀರಾವರಿಗೆ ಒಳಪಡುವುದಿಲ್ಲವೆ? ದಯಮಾಡಿ ಕುಳಿತುಕೊಳ್ಳಿ. ಇಷ್ಟು ತಾಳ್ಮೆಯಿಂದ ಇರುವ ಮನುಷ್ಯನನ್ನೂ ಪರೀಕ್ಷೆ ಮಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ತಾಳ್ಮೆ ನೋಡಿ ನನಗೆ ಸುಸ್ತಾಗಿದೆ. ತಾವು ದಯಮಾಡಿ ತಪ್ಪು ತಿಳಿದುಕೊಳ್ಳಬಾರದು.

ಅಧ್ಯಕ್ಷರು : ನಿಗದಿತ ಕಾರ್ಯಕ್ರಮ ಇಟ್ಟುಕೊಂಡು, ಅದನ್ನು ಬಿಟ್ಟು ಊರೆಲ್ಲಾ ಸುತ್ತಿಕೊಂಡಿದ್ದರೆ ಏನು ಪ್ರಯೋಜನ?

5) ಅಕಾಡೆಮಿಗಳಿಗೆ ಅಧ್ಯಕ್ಷರುಗಳ ನೇಮಕಾತಿಯಲ್ಲಿ ವಿಳಂಬ

* ಶ್ರೀ ವಾಟಾಳ್ ನಾಗರಾಜ್: ಇವತ್ತು ಅಧಿವೇಶನದ ಕೊನೆಯ ದಿವಸ. ಏನಾದರೂ ಕೇಳುವುಕ್ಕೆ ದಯಮಾಡಿ ಅವಕಾಶ ಕೊಡಬೇಕು. ಅತಿ ಮುಖ್ಯವಾಗಿ, ತಮ್ಮ ಹತ್ತಿರ ಬಂದು ಕೇಳಿಕೊಂಡಿದ್ದೇನೆ. ನಾನು ಪ್ರಸ್ತಾಪ ಮಾಡುವಂಥಾದ್ದು, ಅನೇಕ ಕನ್ನಡ ಅಕಾಡೆಮಿಗಳನ್ನು ರದ್ದು ಮಾಡಿದ್ದಾರೆ. ಇವುಗಳಿಗೆ ಅಧ್ಯಕ್ಷರನ್ನು